ಘೋಷಣೆಯೊಂದಿಗೆ ರೈತ ಸಂಘಟನೆಯು ಅರಿವಿನ ಕಿಡಿಹೊತ್ತಿಸಿಕೊಂಡಿತು. ಅಬೂಬಕ್ಕರ್, ಅಪ್ಪು, ಚಿರುಕಂಡ, ಕುಂಞಂಬು ಸೇರಿದಂತೆ ರೈತ ಮುಖಂಡರೆಲ್ಲ ಸೇರಿ ಕಯ್ಯೂರಿಗೆ ಒಂದು ಗ್ರಾಮಪಂಚಾಯಿತಿ ಬೇಕು ಎಂದು ಜಿಲ್ಲಾಧಿಕಾರಿಗೆ ಅರ್ಜಿ ಬರೆದರು. ಹೊಲವಿಲ್ಲದ ರೈತರಿಗೆ ಬಂಜರು ಭೂಮಿಯನ್ನು ಹಂಚಿಕೊಡಬೇಕು ಎಂದು ಸರ್ಕಾರಕ್ಕೆ ಅರ್ಜಿ ಬರೆದರು. ಆಡಳಿತ ವರ್ಗದ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬರದೇ ಇದ್ದಾಗ ಸಂಘಟನೆಯ ಹುಡುಗರೇ ಸೇರಿಕೊಂಡು ಪೊದೆ ಪೊದರು ಕಡಿದು ನೆಲ ಸಪಾಟು ಮಾಡಲಾರಂಭಿಸಿದರು. ಅತ್ತ ಊರಿನ ಜಮೀನ್ದಾರರು ಈ ಸಂಘಟನೆಯನ್ನು ಹತ್ತಿಕ್ಕಲು ತಂತ್ರಗಳನ್ನು ಮಾಡುತ್ತಲೇ ಇದ್ದರು.

ಇದೇ ಸಂದರ್ಭದಲ್ಲಿ ಬಿಕ್ಕಟ್ಟಿನ ನಡುವೆಯೇ ತಾಲ್ಲೂಕಿನ ರೈತ ಸಮ್ಮೇಳನವನ್ನು ಕಯ್ಯೂರಿನಲ್ಲಿ ಆಯೋಜಿಸಲಾಯಿತು. ಸಮ್ಮೇಳನಕ್ಕೆ ಮುನ್ನ ಮೆರವಣಿಗೆ ನಡೆದಾಗ, ಹೊಸದುರ್ಗ ಪೊಲೀಸ್ ಠಾಣೆಯಿಂದ ಕಯ್ಯೂರಿನಲ್ಲಿ ಕರ್ತವ್ಯಕ್ಕಾಗಿ ನಿಯೋಜನೆಗೊಂಡಿದ್ದ ಸುಬ್ಬಯ್ಯನೆಂಬ ಪೊಲೀಸ್, ಮೆರವಣಿಗೆಯನ್ನು ತಡೆಯಲು ಮುಂದಾದ. ಮೆರವಣಿಗೆಯ ಮುಖಂಡರ ಸಾಲಿನಲ್ಲಿದ್ದ ಅಬೂಬಕ್ಕರನ ಕೆನ್ನೆಗೆ ಬಾರಿಸಿದ್ದೇ ತಡ, ಇಡೀ ಮೆರವಣಿಗೆಯು ಸುಬ್ಬಯ್ಯನ ವಿರುದ್ಧ ತಿರುಗಿಬಿತ್ತು. ಇದನ್ನು ನಿರೀಕ್ಷಿಸದೇ ಇದ್ದ ಸುಬ್ಬಯ್ಯ ಓಡಲಾರಂಭಿಸಿದ. ಜನರೂ ಓಡಿಸಿಕೊಂಡು ಹೋದರು. ಊರಿನ ಅಂಚಿಗೆ ಇದ್ದ ತೇಜಸ್ವಿನಿ ನದಿ ಕಂಡ ಕೂಡಲೇ ಸುಬ್ಬಯ್ಯ, ಜೀವಭಯದಿಂದ ನದಿಗೆ ಹಾರಿ ಈಜಲಾರಂಭಿಸಿದ. ಜನರು ದಡದಲ್ಲಿ ನಿಂತು ಕಲ್ಲು ಎಸೆಯತೊಡಗಿದಾಗ, ರೈತ ಮುಖಂಡರು ಈ ಹೋರಾಟವು ಅಹಿಂಸಾತ್ಮಕವಾಗಿರಬೇಕೆಂದು ಮಾಡಿಕೊಂಡ ನಿರ್ಣಯವನ್ನು ನೆನಪಿಸಿದರು. ಹರಿವ ಹೊಳೆಯಲ್ಲಿ ಬಹುದೂರ ಈಜಲಾರದೇ ಸುಬ್ಬಯ್ಯ ಸಾವನ್ನಪ್ಪಿದ.



ಕಯ್ಯೂರಿನ ಸ್ಮಾರಕ

ಈ ಸೂಕ್ಷ್ಮ ಪರಿಸ್ಥಿತಿಯನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯತ್ನಿಸಿದ ಜಮೀನ್ದಾರರು, ಕಯ್ಯೂರಿನ ಸಶಸ್ತ್ರ ರೈತರು ಪೊಲೀಸ್ ಅಧಿಕಾರಿಯನ್ನು ಕೊಲೆ ಮಾಡಿದ್ದಾಗಿ ಮದ್ರಾಸು ಸರ್ಕಾರಕ್ಕೆ ಮತ್ತು ಮಂಗಳೂರು ಜಿಲ್ಲಾಧಿಕಾರಿಗೆ ಮಾಹಿತಿ ನೀಡಿದರು. ಇತ್ತ ಚಿರುಕಂಡ, ನಡೆದ ಘಟನೆಯನ್ನು ವಿವರಿಸಿ, ಇದು ಕೊಲೆಯಲ್ಲ, ನದಿಯ ಸೆಳವಿಗೆ ಸಿಕ್ಕಿ ಸುಬ್ಬಯ್ಯ ತೀರಿಕೊಂಡಿದ್ದಾಗಿ ಉಲ್ಲೇಖಿಸಿದ ಪತ್ರವೊಂದನ್ನು ಸಂಘದ ಕಚೇರಿಯಲ್ಲಿ ಪ್ರಕಟಿಸಿದ. ಆದರೆ ಬ್ರಿಟಿಷ್ ಸರ್ಕಾರವು ತಮಗೆ ಬಂದ ಮಾಹಿತಿಯ ಬಗ್ಗೆ ಗಂಭೀರ ಕ್ರಮ ತೆಗೆದುಕೊಳ್ಳಲು ಮುಂದಾಯಿತು.

ಕಯ್ಯೂರಿನ ಕ್ರಾಂತಿಯ ಕಥೆಯನ್ನು ‘ಚಿರಸ್ಮರಣೆ’ ಹೆಸರಿನಲ್ಲಿ ಕಾದಂಬರಿಯಾಗಿ ರೂಪಿಸಿದವರು ನಿರಂಜನರು. ಅವರು ‘ರಾಷ್ಟ್ರಬಂಧು’ ಪತ್ರಿಕೆಯಲ್ಲಿ ಉದ್ಯೋಗಿಯಾಗಿದ್ದ ಸಂದರ್ಭದಲ್ಲಿ ಮಂಗಳೂರಿನ ಜೈಲಿಗೆ ಭೇಟಿ ನೀಡಿದರು. ಕಯ್ಯೂರಿನ ಹೋರಾಟಕ್ಕೆ ಸಂಬಂಧಿಸಿದ 60 ಜನರನ್ನು ಅಲ್ಲಿ ಬಂಧಿಸಿಡಲಾಗಿತ್ತು. ಅವರನ್ನು ಭೇಟಿಯಾಗಿ, ವಿಚಾರಣೆ ವೇಳೆ ವರದಿಗಾರನಾಗಿ ಅವರು ಹೋರಾಟಗಾರರ ಸಂಪರ್ಕದಲ್ಲಿದ್ದರು. ವಿಚಾರಣೆ ನಡೆದು, ಮೆರವಣಿಗೆ ಆಯೋಜಿಸಿದ ನಾಲ್ವರಿಗೆ ಮರಣದಂಡನೆ ಘೋಷಣೆಯಾದುದನ್ನು ಕಂಡು ನಿರಂಜನ ವಿಚಲಿತರಾಗಿದ್ದರು. 1943ರ ಮಾರ್ಚ್ 29ರಂದು ಬೆಳಿಗ್ಗೆ ಗಲ್ಲುಶಿಕ್ಷೆ ಜಾರಿಗೊಂಡು — ಅಪ್ಪು, ಚಿರುಕಂಡ, ಕುಂಞಂಬು, ಅಬೂಬಕ್ಕರ್ ನೇಣುಗಂಬವೇರಿ ಹುತಾತ್ಮರಾದರು. ಈ ಎಲ್ಲ ಘಟನೆಗಳ ಆಧಾರದಲ್ಲಿಯೇ ನಿರಂಜನರು 1957ರಲ್ಲಿ ‘ಚಿರಸ್ಮರಣೆ’ ಕಾದಂಬರಿ ಬರೆದರು. ಕಯ್ಯೂರು ಕ್ರಾಂತಿಯ ಕಥೆಯು ಇಂದಿನ ತಲೆಮಾರಿನ ಮನದಲ್ಲಿ ಉಳಿದಿದೆ ಎಂದರೆ ಅದಕ್ಕೆ ಈ ಕಾದಂಬರಿಯೇ ಕಾರಣವೆನ್ನಬೇಕು. ಕನ್ನಡದಲ್ಲಿ ಈ ಕಾದಂಬರಿ ಪ್ರಕಟವಾದ ಇಪ್ಪತ್ತು ವರ್ಷಗಳ ಮೇಲೆ ಮಲೆಯಾಳದಲ್ಲಿಯೂ ಇದು ಪ್ರಕಟವಾಯಿತು. ತಮಿಳು, ತೆಲುಗು, ಮರಾಠಿ, ಬಂಗಾಳಿ, ತುಳು, ಇಂಗ್ಲಿಷ್ ಅನುವಾದಗಳೂ ಪ್ರಕಟವಾಗಿವೆ.

ಪ್ರತಿವರ್ಷ ಮಾರ್ಚ್ 29ನ್ನು ‘ಕಯ್ಯೂರು ಹುತಾತ್ಮರ ದಿನ’ವನ್ನಾಗಿ ಆಚರಿಸಲಾಗುತ್ತದೆ. ಕಯ್ಯೂರಿನಲ್ಲಿ ಹುತಾತ್ಮರಿಗಾಗಿ ನಿರ್ಮಿಸಿದ ಸ್ಮಾರಕವಿದೆ. ಪಕ್ಕದಲ್ಲಿರುವ ಕಚೇರಿ ಕಟ್ಟಡದಲ್ಲಿ ಹುತಾತ್ಮರ ವಿವರಗಳನ್ನು ಉಲ್ಲೇಖಿಸಲಾಗಿದೆ. ಮಾಡದ ತಪ್ಪಿಗಾಗಿ ಜೀವತೆತ್ತ ಈ ನಾಲ್ವರು ಹುತಾತ್ಮರ ಜೀವನಕಥೆಯು ಸಮಾನತೆಯ ಕನಸಿಗೆ ಪ್ರೇರಣೆಯಂತಿದೆ.